ಬೌರಿಂಗ್ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮತ್ತು ಇ.ಸಿ.ಜಿ. ಯಂತ್ರಗಳು ಕೆಲಸ ಮಾಡದಿರುವ ಬಗ್ಗೆ

೧೨೬೪ ಶ್ರೀ ಆರ್. ರೋಷನ್ ಬೇಗ್(ಶಿವಾಜಿನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಬೌರಿಂಗ್ ಆಸ್ಪತ್ರೆಯಲ್ಲಿ ಎಕ್ಸ್‌ರೇ ಮತ್ತು ಇಸಿಜಿ ಯಂತ್ರಗಳು ಕೆಲಸ ಮಾಡುತ್ತಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಕಾರ್ಡಿಯಾಲಜಿ ಮತ್ತು ಯೂರಾಲಜಿ ಯೂನಿಟ್‌ಗಳನ್ನು ಬೌರಿಂಗ್ ಆಸ್ಪತ್ರೆಯಿಂದ ಸ್ಥಳಾಂತರಿಸಿರುವುದು ನಿಜವೇ ?

೩) ಬೌರಿಂಗ್ ಆಸ್ಪತ್ರೆಯಲ್ಲಿ ಜನರೇಟರ್ ಇಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

೪) ಆಸ್ಪತ್ರೆಯ ಆವರಣದಲ್ಲಿ ಜನತಾ ಬಜಾರಿನ ಕೆಮಿಸ್ಟ್ ಮತ್ತು ಡ್ರಗ್ಸ್ ಕೌಂಟರನ್ನು (ಹಗಲೂ ಮತ್ತು ರಾತ್ರಿ) ತೆಗೆಯಲು ಸರ್ಕಾರದ ಗಮನದಲ್ಲಿ ಇದೆಯೇ ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

೧) ಈ ಆಸ್ಪತ್ರೆಯಲ್ಲಿರುವ ಮೂರು ಇಸಿಜಿ ಯಂತ್ರಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿವೆ.

ಮೂರು ದೊಡ್ಡ ಎಕ್ಸ್‌ರೇ ಯಂತ್ರಗಳು ಮತ್ತು ಆರು ಚಿಕ್ಕ ಎಕ್ಸ್-ರೇ ಯಂತ್ರಗಳು ಇರುತ್ತವೆ. ಒಂದು ಎಕ್ಸ್‌ರೇ (ದೊಡ್ಡದು) ಮತ್ತು ೨ ಚಿಕ್ಕ ಎಕ್ಸ್‌ರೇ ಯಂತ್ರಗಳು. ಈಗ ಕೆಲಸ ಮಾಡುತ್ತಿಲ್ಲ. ಈ ಎರಡು ಯಂ ಗಳನ್ನು ದುರಸ್ತಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

೨) ಹೌದು.

೩) ಆರು ಕಿಲೋ ವ್ಯಾಟಿನ್ ಒಂದು ಜನರೇಟರ್ ಆಸ್ಪತ್ರೆಯ ಆಪರೇಷನ್ ಥಿಯೇಟರ್‌ನಲ್ಲಿದೆ ಆದರೆ ಇದು ನಿಷ್ಕ್ರಿಯವಾದ್ದರಿಂದ ಇದನ್ನು ದುರಸ್ತಿಪಡಿಸಲು ಕ್ರಮ ಕೈಗೊಂಡಿದೆ. ಅದೂ ಅಲ್ಲದೆ ಒಂದು ೭೦ ಕಿಲೋವ್ಯಾಟಿನ್ ಜನರೇಟರನ್ನು ಹೊಸದಾಗಿ ಆಸ್ಪತ್ರೆಗೆ ಮಂಜೂರು ಮಾಡಲಾಗಿದೆ. ಇದನ್ನು ಇನ್ನು ಸ್ವಲ್ಪ ದಿನಗಳಲ್ಲಿ ಇನ್‌ಸ್ಟಾಲ್ ಮಾಡ ಲಾಗುತ್ತದೆ.

೪) ಹೌದು ಇದೆ.

ಮಡಿಕೇರಿ ಮತ್ತು ಕುಶಾಲನಗರದಲ್ಲಿ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ

೧೧೯೨. ಶ್ರೀ ಡಿ. ಎ. ಚಿನ್ನಪ್ಪ(ಮಡಿಕೇರಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಡಿಕೇರಿ ಮತ್ತು ಕುಶಾಲನಗರಗಳಲ್ಲಿ ಸರ್ಕಾರದವರು ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸು ತ್ತಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ೧೯೮೨-೮೩, ೧೯೮೩-೮೪ ಮತ್ತು ೧೯೮೪-೮೫ನೇ ಸಾಲುಗಳಲ್ಲಿ ಖರ್ಚಾದ ಹಣವೆಷ್ಟು ?

ಇ) ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?